


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –09 ದಿನಾಂಕ : 03–09–2025


## ದಿನಾಂಕ: 03.09.2025ರ ವಾರದ ಸಭೆ

**ದಿನಾಂಕ: 03.09.2025 ರ ಬುಧವಾರ ನಮ್ಮ ಈ ವರ್ಷದ 9 ನೇ ವಾರದ ಸಭೆಯಲ್ಲಿ ಕೆಳದಿ ಶಿವಪ್ಪನಾಯಕ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿರುವ ಡಾ.ಕೆ.ಸಿ. ಶಶಿಧರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, "ಆಹಾರ ಕೌಶಲ್ಯ" ಎಂಬ ವಿಚಾರವಾಗಿ ವಿಸ್ತೃತವಾದ ವಿವರಗಳನ್ನು ಹಾಗೂ ವಚನ ಸಾಹಿತ್ಯಗಳಲ್ಲಿ ಉಲ್ಲೇಖವಾಗಿರುವ ನಮ್ಮ ಆಹಾರ ಪದ್ಧತಿಗಳ ಬಗ್ಗೆಯೂ ತಿಳಿಸಿ ಮಾತನಾಡಿದರು. ವೇದಿಕೆಯಲ್ಲಿ ಮುಖ್ಯ ಅತಿಥಿಗಳೊಂದಿಗೆ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್.ಆನಂದ್ ಹಾಗೂ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದರು.**




ರೊ.ಎನ್.ವಿ.ಭಟ್‌ರವರಿಂದ ಸುಶ್ರಾವ್ಯ ಪ್ರಾರ್ಥನಾ ಗೀತೆ "ನೀ ನಮ್ಮ ಗೆಲುವಾಗಿ ಬಾ" ಗಾಯನವಾಯಿತು. ರೊ. ಹೆಚ್.ಎಸ್. ಮೋಹನ್‌ರವರು ಸರ್ವರನ್ನು ವಿಶಿಷ್ಟರೀತಿಯಲ್ಲಿ ಸ್ವಾಗತಿಸಿದರು. ರೊ.ಶೈಲಿನ್‌ರವರು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಉಪಹಾರದ ವ್ಯವಸ್ಥೆ ಮಾಡಿದ್ದರು. ರೊ. ಡಿ.ಎಲ್. ಮಂಜುನಾಥ್ ರವರು ರೋಟರಿ ಮಾಹಿತಿ ನೀಡಿದರು. ರೊ.ಚಂದ್ರಶೇಖರ್‌ರವರಿಂದ ಕ್ಲಾಸಿಫಿಕೇಶನ್ ಟಾಕ್. ಅವರು ಮಾತನಾಡುತ್ತಾ, ತಮ್ಮ ವೃತ್ತಿ ಜೀವನದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಸರ್ಕಾರದ ನಿರ್ದೇಶನದಂತೆ ಹಲವಾರು ಕಡೆ ಸೇವೆ ಮಾಡಿ, ಈಗ ನಿವೃತ್ತಿ ಜೀವನದಲ್ಲಿದ್ದೇನೆ. ನನ್ನ ಸೇವಾವಧಿಯಲ್ಲಿ ನಮ್ಮ ಊರಿನಲ್ಲಿ ನೀರಿನ ಯೋಜನೆ ಮಾಡಲು ಅವಕಾಶ ದೊರಕಿದ್ದು ನನ್ನ ಪುಣ್ಯ ಎಂದು ತಿಳಿಸಿ, ನಾನು ಮಾಡಿದ ಕಾರ್ಯಗಳು ನನಗೆ ತೃಪ್ತಿ ತಂದಿವೆ. ರೊ.ಕೆ. ಸೂರ್ಯನಾರಾಯಣ ಉಡುಪರವರು ಈ ಕ್ಲಬ್ ಸೇರುವಂತೆ ಮಾಡಿ ಪ್ರೋತ್ಸಾಹಿಸಿದ್ದಾರೆ ಎಂದರು.

ಪುನಃ ಸಂಸ್ಥೆಗೆ ಸೇರ್ಪಡೆಯಾದ ರೊ. ಸೀಮಾ ಸದಾನಂದ ರವರನ್ನು ವೇದಿಕೆಗೆ ಆಹ್ವಾನಿಸಿದ ಅಧ್ಯಕ್ಷರು, ಮಾಜಿ ಸಹಾಯಕ ಗವರ್ನರ್. ರೊ. ಸುನೀತಾ ಶ್ರೀಧರ್‌ರವರು, ರೊ.ಸೀಮಾ ಸದಾನಂದ ರವರಿಗೆ ರೋಟರಿ ಪಿನ್ ತೊಡಿಸುವುದರ ಮೂಲಕ ಕ್ಲಬ್‌ಗೆ ಬರಮಾಡಿ ಕೊಂಡರು. ರೊ. ಶೈಲಿನ್ ಮತ್ತು ರೊ.ಮಲ್ಲಿಕಾ ವಿ.ಜೋಯ್ಸ್‌ರವರು ಕಾರ್ಯದರ್ಶಿಯವರ







ಕರೆಯಂತೆ ವೇದಿಕೆಗೆ ಆಗಮಿಸಿ, ತಮ್ಮ ಹುಟ್ಟು ಹಬ್ಬದ ಶುಭಾಶಯಗಳೊಂದಿಗೆ ನೆನಪಿನ ಕಾಣಿಕೆ ಸ್ವೀಕರಿಸಿದರು. ರೊ.ವೈ.ವಿ. ವೆಂಕಟರಮಣ ಜೋಯ್ಸ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಡಾ. ಕೆ.ಸಿ. ಶಶಿಧರ್‌ರವರು ಹಾಲಿ ಕೆಳದಿ ಶಿವಪ್ಪನಾಯಕ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದು, ಹಲವಾರು ಸಂಶೋಧನೆ ಹಾಗೂ ಪ್ರಯೋಗಗಳನ್ನು ಮಾಡಿದ್ದಾರೆ. ಅಲ್ಲದೇ ಹಲವಾರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. 50 ಸಂಶೋಧನಾ ಬರಹಗಳು, 25 ಇನ್ನಿತರ ಬರಹಗಳುಳ್ಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ 100 ಜನಪ್ರಿಯ ಬರಹಗಳಾಗಿದ್ದು ಕೆಲವನ್ನು ಪಠ್ಯಪುಸ್ತಕಗಳಿಗೆ ಕರ್ನಾಟಕ ಸರ್ಕಾರ ಅಳವಡಿಸಿಕೊಂಡಿದೆ. ಅಲ್ಲದೇ ಸಿವಿಲ್ ಇಂಜಿನಿಯರಿಂಗ್ ಪದವಿ, ವಿಜ್ಞಾನ ವಿಷಯದಲ್ಲಿ ಕನ್ನಡ ವಿಶ್ವವಿದ್ಯಾನಿಲಯ ದಿಂದಲೂ ಡಾಕ್ಟರೇಟ್ ಪಡೆದಿದ್ದು ಸುಮಾರು 9 ಬಗೆಯ ಪದವಿಗಳನ್ನು ಪಡೆದಿದ್ದಾರೆ.

ಮುಖ್ಯ ಅತಿಥಿಗಳಾದ ಡಾ. ಶಶಿಧರ್‌ರವರು ಮಾತನಾಡುತ್ತಾ ಆಹಾರ ಮತ್ತು ಕೌಶಲ್ಯವನ್ನು ಜೀವನದ ಕೌಶಲ್ಯ ಎಂಬ ದೃಷ್ಟಿಯಲ್ಲಿ ನೋಡಲಾಗಿದೆ. ಆಹಾರ ಜೀವನಾವಶ್ಯಕ. ಭೂಮಿ ಮೇಲೆ ಕಾಲಿಟ್ಟಾಗ ಬೇಕಾಗಿದ್ದುದು ಆಹಾರ.

## ಈ ವಾರದ ಸಭೆ

**ದಿನಾಂಕ: 10–09–2025, ಬುಧವಾರ** **ಸಂಜೆ 6:30**

**ಅತಿಥಿ : ಶ್ರೀ ಬಿ.ಕೆ. ವೆಂಕಟೇಶ ಮೂರ್ತಿ, ನಿವೃತ್ತ ಶಿಕ್ಷಕರು**

**ವಿಷಯ : 'ಭವಿಷ್ಯ ಭಾರತದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ'**

**ನಮ್ಮ ಕ್ಲಬ್‌ನ ಶಿಕ್ಷಕರು ಹಾಗೂ ಇಂಟರ‍್ಯಾಕ್ಟ್ ಕ್ಲಬ್‌ನ ಶಾಲೆಯ ಶಿಕ್ಷಕರುಗಳಿಗೆ ಗೌರವಾರ್ಪಣೆ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













ಅದು ಬಳಕೆಯಾಗುತ್ತಾ, ತಯಾರಿಕೆಯಾಗುತ್ತಾ, ಮಾರ್ಪಾಡಾಗುತ್ತಾ ಬಂದಿದೆ. ಆಹಾರ ತಯಾರಿಕೆ ಕೂಡ ವಿಜ್ಞಾನವಾಗಿ ಸೃಷ್ಟಿಯಾಗಿದೆ. ಆ ಮಾರ್ಪಾಡುಗಳು ನಿತ್ಯ ಜೀವನದ ಕೌಶಲ್ಯವಾಗಿದ್ದು, ಪ್ರತೀ ಹಂತದಲ್ಲೂ ಅಭಿವೃದ್ಧಿಯಾಗುತ್ತಲೇ ಇದೆ. ಬದುಕುಳಿಯಲು ಆಹಾರಬೇಕು. ಬದುಕಿನಲ್ಲಿ ಒಂದರೆಗಳಿಗೆ ಆಹಾರವಿಲ್ಲದಿದ್ದರೆ ಕಷ್ಟ. ಅಲ್ಲದೇ ಆಹಾರ ತಯಾರಿಕೆಯೂ ಒಂದು ಕೌಶಲ್ಯ. ಇದು ಜೀವನಾವಶ್ಯಕ ಕೌಶಲ್ಯ ಎಂಬುದನ್ನು ಮರೆತಿದ್ದೇವೆ ಎಂದರು.

ವಚನಕಾರರ ಪ್ರಕಾರ ಈ ಆಹಾರದಲ್ಲಿ ವ್ರತಗಳಿವೆ. 84 ಜೀವವ್ರತ. 64 ಶೀಲವ್ರತ 36 ಆಚಾರವ್ರತ. ವ್ರತ ಎಂದರೆ ಆಚಾರ. ಪ್ರತಿಯೊಂದರಲ್ಲೂ ಶುದ್ಧಾತ್ಮನಾಗಿರಬೇಕು. ನೇಮವ್ರತನಾಗಿರಬೇಕು. ಆಚಾರ ವ್ರತದಲ್ಲಿ ಅಡಿಗೆ ಮಾಡುವುದೂ ಒಂದು ಕೌಶಲ್ಯ. ಆಹಾರ ಕೌಶಲ್ಯವನ್ನು ಹೆಂಗಸರಿಗೆ ಮಾತ್ರವೇ ಹೇಳಿಕೊಟ್ಟಿದ್ದಾರೆ. ಆಹಾರ ಕೌಶಲ್ಯದಿಂದ ಕ್ರಿಯೇಟಿವಿಟಿ ಜಾಸ್ತಿಯಾಗುತ್ತೆ. ಅವರು ಕಾನ್ಫಿಡೆನ್ಸ್ ಹೊಂದಿರುತ್ತಾರೆ. ಇದು ಸಂಬಂಧ ಕಟ್ಟುವ ಕಲೆ. ಇದರಿಂದ ಪ್ರೀತಿ ಪಾತ್ರರನ್ನು ಒಲಿಸಿಕೊಳ್ಳಬಹುದು. ಸಂಸ್ಕೃತಿಯನ್ನು ಚೆನ್ನಾಗಿ ಕಟ್ಟಿಕೊಡಬಹುದು. ಕಡಿಮೆ ಖರ್ಚಿನಲ್ಲಿ ಹೊಟ್ಟೆ ತುಂಬಿಸಬಹುದು ಎಂದರು.

ಅಡಿಗೆ ಕೌಶಲ್ಯವನ್ನು ಹೊಂದಿರುವ ಮನೋಲ್ಲಾಸ ಪುಸ್ತಿಕೆಯ ಬಗ್ಗೆ ಎಲ್ಲರ ಗಮನ ಸೆಳೆದ ಮುಖ್ಯ ಅತಿಥಿ ಡಾ.ಶಶಿಧರ್‌ರವರು, ಅದರಲ್ಲಿರುವ ಹಲವಾರು ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು. ಅದರಲ್ಲಿರುವ ಸಸ್ಯಾಹಾರ ಮತ್ತು ಮಾಂಸಾಹಾರದ ಬಗ್ಗೆ ವಿವರಿಸಿದರು. ಆಹಾರದ ಕೌಶಲ್ಯದ ಅರಿವನ್ನು ಈ ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾಯಿಸಬೇಕಾಗಿದೆ ಎನ್ನುತ್ತಾ ಅಡಿಗೆ ನನ್ನ ಇಷ್ಟವಾದ ಹವ್ಯಾಸ ಎಂದರು.

ಎಷ್ಟು ಪ್ರಮಾಣದಲ್ಲಿ ಏನನ್ನು ಬಳಸಬೇಕು ಎನ್ನುವುದು ಆಹಾರ ತಯಾರಿಕೆಯಲ್ಲಿನ ಮುಖ್ಯವಾದ ಅಂಶ. ಆಹಾರದ ವಿಚಾರದಲ್ಲಿ ನಾವುಗಳು ಹಿಂದುಳಿದಿದ್ದೇವೆ. ವ್ಯವಹಾರದ ದೃಷ್ಟಿಯಲ್ಲಿ ಇದು ಅತ್ಯಂತ ಉತ್ತಮವಾದ ಕಲೆ. ಐಟಿ.ಬಿಟಿ. ಬಿಟ್ಟರೆ ವೈಜ್ಞಾನಿಕವಾಗಿ ಆಹಾರದ ತಯಾರಿಕೆ ಉತ್ತಮ ಉದ್ಯಮ. ಇನ್ನು 10 ವರ್ಷಗಳಲ್ಲಿ ಭಾರತ ಇದರಲ್ಲಿ ಸಾಧನೆ ಮಾಡಬಹುದು. ಈ ಆಹಾರದ ಕ್ಷೇತ್ರವನ್ನೂ ಭಾರತ ಆಳಬಹುದು ಎಂದರು. ನಿಮಗೆ ಗೊತ್ತಿಲ್ಲದಿರುವ ವಿದೇಶದ ಆಹಾರ ತಯಾರಿಸುವುದನ್ನೂ ಕಲಿಯಬೇಕು. ಆ ಬಗ್ಗೆ ಪ್ರಯೋಗ ಮಾಡಿ ನೋಡಬಹುದೇನೋ ಎಂದರು. ಮಲೆನಾಡಿನ ಸಿಹಿತಿಂಡಿ ತೊಡೆದೇವು ಬಗ್ಗೆ ವಿವರಿಸಿದ ಅವರು, ಅತ್ಯಂತ ಸುಲಭದ ಕಡಿಮೆ ಖರ್ಚಿನ ಈ ಸಿಹಿ ಖಾದ್ಯದ ತಯಾರಿಕೆ ಮಾಡುವ ಕೌಶಲ್ಯ ಮುಂದಿನ ಜನಾಂಗಕ್ಕೆ ವರ್ಗಾವಣೆ ಮಾಡಿಲ್ಲದಿರುವುದರಿಂದ ಅದು ಮುಂದುವರೆದಿಲ್ಲ. ಅದನ್ನು ಮಾಡುವ ಹದ ಮತ್ತು ಬೆಂಕಿ ಕೊಡುವಾಗ ಬಹಳ ಜಾಗರೂಕರಾಗಿ ಇರಬೇಕು. ಇಲ್ಲವಾದಲ್ಲಿ ಖಾದ್ಯ ಚೆನ್ನಾಗಿ ತಯಾರಾಗಲ್ಲ. ಹಲವಾರು ತೊಂದರೆಯಿರುವುದರಿಂದ ಇದನ್ನು ಮುಂದಿನ ಜನಾಂಗ ಕಲಿಯಲಿಲ್ಲ. ಇದನ್ನು ಮಾಡಲು ಬೇರೆ ರೀತಿಯ ವಿನ್ಯಾಸದ ಒಲೆಯನ್ನೇ ಮಾಡಿಕೊಳ್ಳಬೇಕು. ಈ ತೊಡೆದೇವು ಮಲೆನಾಡಿನ ವಿಶೇಷ ಖಾದ್ಯವಾಗಿದೆ ಎಂದರು.

ನಾವು ಯಾವ ಆಹಾರವನ್ನು ಅಭ್ಯಾಸ ಮಾಡಿಕೊಂಡಿರುತ್ತೇವೋ ಅದನ್ನು ತಕ್ಷಣ ಬದಲಾವಣೆ ಮಾಡಿಕೊಳ್ಳಲಾಗದು. ಗೆಡ್ಡೆ ಗೆಣಸು, ಹಸಿಮಾಂಸ ತಿನ್ನುತ್ತಿದ್ದೆವು. ಈಗಲೂ ಹಾಗೇ ಮಾಡಲಾಗದು. ಅಭಿವೃದ್ಧಿಯಾದ ಹಾಗೆ ಪ್ರಾದೇಶಿಕವಾಗಿ ಆಹಾರದ ಬದಲಾವಣೆ ಮಾಡಿಕೊಳ್ಳಬೇಕು ಎಂದರು.

ಯಾವ ಯಾವ ಕಾಲದಲ್ಲಿ, ಯಾವ ಯಾವ ಋತುಗಳಲ್ಲಿ ಖಾದ್ಯಗಳನ್ನು ಮತ್ತು ಆಹಾರಗಳನ್ನು ಮಾಡಬೇಕು ಎಂದು ತಿಳಿದಿರಬೇಕು. ಈ ಬಗ್ಗೆ ಮಲೆನಾಡಿಗರಿಗೆ ಚೆನ್ನಾಗಿ ತಿಳಿದಿದೆ. ಮಳೆಗಾಲದಲ್ಲಿ ತೀಕ್ಷ್ಣ ಆಹಾರ, ಶಿಶಿರದಲ್ಲಿ ಬಿಸಿ ಆಹಾರ ಹೀಗೆ ಪ್ರಯೋಗಗಳನ್ನು ಮಾಡಬಹುದು. ಹವಮಾನಕ್ಕೆ ಋತುವಿಗೆ, ಅನುಕೂಲವಾಗುವ ಆಹಾರ ತೆಗೆದುಕೊಳ್ಳಬೇಕು. ಅಡುಗೆ ಮೇಲೆ ವೈಜ್ಞಾನಿಕ ಅಧ್ಯಯನ ಪ್ರಾರಂಭವಾಗಿದೆ. ಈ ಹಿಂದೆ ತಯಾರಿಸುತ್ತಿದ್ದ ಹಾಲಾಡಿಕೆ ಬಗ್ಗೆಯೂ ವಿವರಗಳನ್ನು ನೀಡಿದರು.

ಆಹಾರ ತಯಾರಿಕೆಯಲ್ಲಿ ಮೂಲಜ್ಞಾನ ತಿಳಿದುಕೊಳ್ಳಬೇಕು. ನಮ್ಮ ಮಕ್ಕಳಿಗೆ ಚಿಕ್ಕವರಿದ್ದಾಗಲೇ ಆಹಾರ ತಯಾರಿಕಾ ಕೌಶಲ್ಯ ಕಲಿಸಬೇಕು, ಹೇಳಿಕೊಡಬೇಕು. ಈ ಸಂದರ್ಭದಲ್ಲಿ ಸಿರಿ ಧಾನ್ಯದ ಬಗ್ಗೆಯೂ ಮಾತನಾಡಿದರು. ನಾವು ಎಷ್ಟು ತಿನ್ನಬೇಕು. ಏನು ತಿನ್ನಬೇಕು. ಎಷ್ಟು ಪ್ರಮಾಣದಲ್ಲಿ ತಿನ್ನಬೇಕು ಎಂದು ತಿಳಿಸಿ ನಮಗೇನು ಬೇಕೋ ಅದನ್ನು ತಿನ್ನಬೇಕು ಎಂದರು.

ನಿಸರ್ಗದಲ್ಲಿ ದೊರಕುವುದನ್ನು ಬಿಟ್ಟು ಬೇರೆ ಏನನ್ನೂ ತಿನ್ನಲು ಸಾಧ್ಯ ಎಂದು ಪ್ರಶ್ನಿಸಿದ ಮುಖ್ಯ ಅತಿಥಿಗಳು, ಒಳ್ಳೆಯ ಆಹಾರವನ್ನು ತೆಗೆದುಕೊಳ್ಳಬೇಕು. ಇದರಿಂದ ನಮ್ಮ ದೇಹದ ಸ್ಥಿತಿ ಚೆನ್ನಾಗಿಟ್ಟುಕೊಳ್ಳ ಬಹುದು. ನಮ್ಮ ಮನಸ್ಸಿಗೆ ದೇಹಕ್ಕೆ ತಾಲೀಮು ಬೇಕು ಎಲ್ಲರೂ ಕುಳಿತು ಕಲೆತು ಆಹಾರ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು. ಆಹಾರದ ವಿಷಯ ವೈಯ್ಯಕ್ತಿಕವಾದರೂ, ಈ ಕಲೆಯನ್ನು, ಕೌಶಲ್ಯದ ಮಹತ್ವವನ್ನು ಮಕ್ಕಳಿಗೆ ತಿಳಿಸಿರಿ. ಪ್ರಕೃತಿಗಾಗಿ ಮಕ್ಕಳು ಇದನ್ನು ಕಲಿಯಬೇಕು. ಆಹಾರದ ವಿಷಯವನ್ನು ಮುಂದಿನ ಪೀಳಿಗೆಗೆ ವರ್ಗಾವಣೆ ಮಾಡಿ ಎಂದರು.

ರೊ.ಎನ್.ವಿ.ಭಟ್, ರೊ.ಎಸ್.ಜಿ.ಗೋಪಾಲ್, ರೊ. ಎಂ.ವಿ. ನಾಗೇಶ್, ಹೆಚ್.ಎಸ್. ಮೋಹನ್ ಮುಂತಾದವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು. ಅಜಿನಾಮೊಟೋದ ಬಗ್ಗೆ ಪ್ಲಾಸ್ಟಿಕ್ ಅಕ್ಕಿಯ ಬಗ್ಗೆ, ಹೈಬ್ರೀಡ್ ತಳಿಯ ತರಕಾರಿಗಳ ಬಗ್ಗೆಯೂ ವಿವರಿಸಿದರು. ಪ್ಲಾಸ್ಟಿಕ್ ಅಕ್ಕಿ ಎನ್ನುವುದು ಅವಾಸ್ತವಿಕ. ರುಚಿ ಒದಗಿ ಬರಲು ಬಳಸುವ ರಾಸಾಯನಿಕದ ಬಗ್ಗೆಯೂ ತಿಳಿಸಿ ಅದು ಈಗ ದೊಡ್ಡ ಸಮಾರಂಭಗಳಲ್ಲಿ ಅನಿವಾರ್ಯ ವೆನ್ನುವಂತಾಗಿದೆ ಎಂದರು.

ಅಧ್ಯಕ್ಷರಾದ ರೊ.ಆರ್. ಆನಂದರವರು ಮಾತನಾಡಿ, ಯಾವುದೇ ಆಗಲಿ ಕೌಶಲ್ಯ ಮುಖ್ಯವಾಗುತ್ತದೆ. ಆಹಾರ ತಯಾರಿಕೆಯಲ್ಲಂತೂ ಕೌಶಲ್ಯಬೇಕೇ ಬೇಕು ಎಂಬುದನ್ನು ಇವತ್ತು ಮುಖ್ಯ ಅತಿಥಿಗಳು ಆಹಾರ ಕೌಶಲ್ಯದ ಬಗ್ಗೆ ತಿಳಿಸಿದ್ದಾರೆ. ಬೇರೆ ಯಾವುದರಿಂದಲಾಗದಿದ್ದರೂ ಊಟದ ತಯಾರಿಕಾ ಕೌಶಲ್ಯದಿಂದ ಎಲ್ಲರನ್ನು ಸಂತೃಪ್ತಿಗೊಳಿಸಬಹುದು ಎನ್ನುತ್ತಾ ಈ ವಿಷಯದ ಬಗ್ಗೆ ಬೆಳಕು ಚೆಲ್ಲಿ, ಚೆನ್ನಾಗಿ ಮಾತನಾಡಿದ ಮುಖ್ಯ ಅತಿಥಿಗಳಿಗೆ ಕೃತಜ್ಞತೆ ತಿಳಿಸಿ, ನೆನಪಿನ ಕಾಣಿಕೆ ನೀಡಿದರು. ಕೊನೆಯಲ್ಲಿ ರೊ.ಸಿ.ಬಿ.ವೀರಣ್ಣನವರು ವಂದನಾರ್ಪಣೆ ಮಾಡಿದರು. ಅಂದು ರೊ.ಶೈಲಿನ್‌ರವರು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಉಪಹಾರದ ವ್ಯವಸ್ಥೆಯನ್ನು ಮಾಡಿದ್ದರು.

# ರೋಟರಾಕ್ಟ್ ಕ್ಲಬ್ ಆಫ್ ಶಿವಮೊಗ್ಗ ಸ್ಟಾರ್ಸ್‌ನ ಮುಂದಿನ ವರ್ಷದ ವಿವಿಧ ಯೋಜನೆಗಳ ಉದ್ಘಾಟನಾ ಸಮಾರಂಭ







**ನಮ್ಮ ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ ರೋಟರಾಕ್ಟ್ ಕ್ಲಬ್ ಆಫ್ ಶಿವಮೊಗ್ಗ ಸ್ಟಾರ್ಸ್ ಇವರ ಮುಂದಿನ ವರ್ಷದ ಕಾರ್ಯಯೋಜನೆಗಳ ಉದ್ಘಾಟನೆಯು ದಿನಾಂಕ: 24.08.2025 ರಂದು ಬೆಳಿಗ್ಗೆ 11.30 ಕ್ಕೆ ರೋಟರಿ ಯುವಕೇಂದ್ರದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.**

ಮುಖ್ಯ ಅತಿಥಿಗಳಾಗಿ ರೋಟರಿ ಜಿಲ್ಲೆ 3182 ರ ರೋಟರಾಕ್ಟ್ ಜಿಲ್ಲಾ ಸಮಿತಿ ಚೇರ್ಮನ್ ರೊ.ನವೀನ್ ಅಮೀನ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಆರ್.ಆನಂದರವರು ಉದ್ಘಾಟಕರಾಗಿ, ರೋಟರಿ ಜಿಲ್ಲಾ ಉಪ ಚೇರ್ಮನ್‌ರಾದ ರೊ.ಧನರಾಜ್‌ರವರು ಅತಿಥಿಗಳಲ್ಲೊಬ್ಬರಾಗಿ, ರೊ.ಕೆ. ಸೂರ್ಯನಾರಾಯಣ ಉಡುಪರು, ರೋಟರಿ ಕ್ಲಬ್ ಶಿವಮೊಗ್ಗದ ರೋಟರಾಕ್ಟ್ ಚೇರ್‌ಮನ್, ರೊ.ಎನ್.ಜಿ. ಉಷಾ ನಿರ್ದೇಶಕರು, ಯುವಜನ ಸೇವಾ ಸಮಿತಿ ರೋಟರಿ ಕ್ಲಬ್, ಶಿವಮೊಗ್ಗ, ರೊ.ತೀರ್ಥಯ್ಯ, ಜೋನಲ್ ಕೋ–ಆರ್ಡಿನೇಟರ್, ರೋಟರಾಕ್ಟ್ ಅಧ್ಯಕ್ಷರಾದ ಡಾ. ಮನೋಜ್ ಹೆಚ್.ಆರ್., ರೋಟರಾಕ್ಟ್ ಕಾರ್ಯದರ್ಶಿ ವಿಶ್ವಾಸ್ ಹೆಚ್.ಆರ್. ರೋಟರಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರೊ.ಸುಮಲತ ಭೂಪಾಳಂ ರವರು "ಭಾವದಲೆಯಲಿ ಶಾರದೆಯ ಗಾನ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥಿಸಿ ಶುಭ ಕೋರಿದರು. ರೊ.ಎನ್.ಜಿ. ಉಷಾರವರು ಸರ್ವರನ್ನು ಸ್ವಾಗತಿಸಿದರು. ರೊ.ಕಿಶೋರ್ ಶೀರನಾಳಿ ರೋಟರಿ ಚತುರ್ವಿಧ ಪರೀಕ್ಷೆಯ ಮಾಹಿತಿ ನೀಡಿದರು. ಉದ್ಘಾಟಕರಾದ ರೊ.ಆರ್. ಆನಂದರವರ ಪರಿಚಯವನ್ನು ಕು.ನಿಸರ್ಗರವರು ನೆರವೇರಿಸಿದರು. ರೊ.ಆರ್. ಆನಂದರವರು ದೀಪ ಬೆಳಗಿಸುವುದರ ಮೂಲಕ ಮುಂದಿನ ವರ್ಷದ ಕಾರ್ಯಯೋಜನೆಗಳ ಉದ್ಘಾಟನೆಯನ್ನು ನೆರವೇರಿಸಿದರು. ಅವರೊಂದಿಗೆ ರೊ.ನವೀನ್ ಅಮೀನ್, ರೊ.ಬಿ.ಜಿ.ಧನರಾಜ್, ಡಾ. ಮನೋಜ್, ವಿಶ್ವಾಸ್ ಹೆಚ್.ಆರ್. ರೊ.ವಿಶ್ವಾಸ್ ಎಲಬುರ್ಗಿ ಮುಂತಾದವರಿದ್ದರು.

ರೊ. ಆರ್.ಆನಂದರವರು ಮಾತನಾಡಿ, ಈಗಿನ ಯುವಪೀಳಿಗೆಗೆ ಅಂದರೆ ರೋಟರಾಕ್ಟ್, ಇಂಟರಾಕ್ಟ್ ಯಾವುದೇ ಆಗಲಿ ಅವರುಗಳಿಗೆ ಹಣಕಾಸು ತೊಂದರೆ ಇರುವುದಿಲ್ಲ. ಏಕೆಂದರೆ ರೋಟರಿಯಷ್ಟು ಹಣಕಾಸು ಈ ತರಹದ ರೋಟರಿ ಅಂಗ ಸಂಸ್ಥೆಗಳಿಗೆ ಬೇಕಾಗುವುದಿಲ್ಲ. ಈ ಹಿಂದೆ ಬೆಂಗಳೂರಿನಲ್ಲಿ ನಾನು ರೋಟರಾಕ್ಟ್ ಸೇರಿದ್ದೆ ಎಂದು ನೆನಪು ಮಾಡಿಕೊಂಡ ಅವರು, ಈಗ ಪ್ರತೀವರ್ಷ ರೋಟರಿ ಸದಸ್ಯರು ಅಂತರರಾಷ್ಟ್ರೀಯ ರೋಟರಿಗೆ 82–83 ಡಾಲರ್ ಕೊಡಬೇಕಾಗುತ್ತದೆ. ಆದರೆ ರೋಟರಿ ಅಂಗ ಸಂಸ್ಥೆಯ ಸದಸ್ಯರುಗಳು 8–9 ಡಾಲರ್ ಕೊಟ್ಟರೆ ಸಾಕು. ರೋಟರಿ ಕ್ಲಬ್, ಶಿವಮೊಗ್ಗ ಪ್ರಾಯೋಜಿಸಿರುವುದರಿಂದ ನಿಮಗೆ ತರಬೇತು ನೀಡಲು, ಸಹಕಾರ, ಪ್ರೋತ್ಸಾಹ ನೀಡಲು ಜನರಿದ್ದಾರೆ. ನಿಮಗೆ ಸಭೆ ಸೇರಲು ಸಭಾಂಗಣವಿದೆ. ಈ ಎಲ್ಲಾ ಸೌಕರ್ಯವಿದ್ದರೂ ರೋಟರಾಕ್ಟ್ ಸದಸ್ಯರುಗಳಾದ ನೀವು ಮನಸ್ಸು ಮಾಡಿ ಸಭೆ ಸೇರಬೇಕು. ಇಲ್ಲಿನ ಸಭೆಯ ಪ್ರೋಟೋಕಾಲ್‌ಗಳನ್ನು ತಿಳಿಸಲು, ಪ್ರಾಜೆಕ್ಟ್ ಹೇಗೆ ಮಾಡಬೇಕು ಎಂದು ತಿಳಿಸಲು ರೋಟರಿ ಸದಸ್ಯರಿದ್ದಾರೆ. ಅವರುಗಳ ಸಹಕಾರವಿದ್ದೇ ಇದೆ. ನೀವುಗಳು ಮನಸ್ಸು ಮಾಡಿದರೆ, ಓಪನ್ ಅಪ್ ಆದರೆ ಹೆಚ್ಚೆಚ್ಚು ಚಟುವಟಿಕೆಗಳನ್ನು ಮಾಡಲು ಅವಕಾಶವಿದೆ. ಜೊತೆಗೆ ರೋಟರಿ ಸದಸ್ಯರೊಂದಿಗೆ ಭಾಂದವ್ಯ ಬೆಳೆಯುತ್ತದೆ. ನಮ್ಮ ಶಿವಮೊಗ್ಗ ರೋಟರಿ ಸಭೆಗಳಲ್ಲಿ ಭಾಗವಹಿಸಿದರೆ ನಿಮ್ಮಗಳಿಗೆ ತುಂಬಾ ಅನುಕೂಲ ವಾಗುತ್ತದೆ. ಇಲ್ಲಿ ತುಂಬಾ ಕಲಿಯಬಹುದು ಎಂದರು. ಈ ಕಾರ್ಯಕ್ರಮ ಆಯೋಜಿಸಿ ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ರೊ.ಉಷಾ ಎನ್.ಜಿ ರವರಿಗೆ ವಂದನೆಗಳು ಎಲ್ಲಾ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದರು.

ರೋಟರಾಕ್ಟ್ ಅಧ್ಯಕ್ಷ ಡಾ. ಮನೋಜ್ ಹೆಚ್.ಆರ್.ರವರು ಮುಂದಿನ ಸಾಲಿನ ತಮ್ಮ ಕಾರ್ಯಯೋಜನೆಯ ವಿವರಗಳನ್ನು ನೀಡಿದರು. ಸದಸ್ಯತ್ವ ಶುಲ್ಕದಲ್ಲಿ ಫ್ಲೆಕ್ಸಿಬಿಲಿಟಿ ಮಾಡಿಕೊಂಡು ಮತ್ತು ಎಲ್ಲಾ ಒಟ್ಟಾಗಿ ಕಾರ್ಯಕ್ರಮಗಳನ್ನು ಮಾಡಿದರೆ, ಈ ಕ್ಲಬ್‌ನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದು ಎಂದು ತಿಳಿಸುತ್ತಾ ತಮಗೆ ಈ ಸ್ಥಾನ ಕೊಟ್ಟಂತಹ ರೋಟರಿಗೆ ಧನ್ಯವಾದ ತಿಳಿಸಿದರು.

ಇದೇ ಸಂದರ್ಭದಲ್ಲಿ ನವಲೆಯ ಸರ್ಕಾರಿ ಶಾಲೆಯ ಮಕ್ಕಳಿಗೆ ಸ್ಟಡಿ ಮೆಟೀರಿಯಲ್ಸ್‌ನ್ನು ನೀಡಲಾಯಿತು. ರೋಟರಿ ಜಿಲ್ಲೆ 3182ರ ರೋಟರಾಕ್ಟ್ ಜಿಲ್ಲಾ ಉಪಾಧ್ಯಕ್ಷರಾದ ರೊ. ಬಿ.ಜಿ. ಧನರಾಜ್‌ರವರು ಮಾತನಾಡಿ, ಒಳ್ಳೆಯ ಸಂಪನ್ಮೂಲ ವ್ಯಕ್ತಿಗಳನ್ನು ರೋಟರಾಕ್ಟ್‌ಗೆ ಕೊಟ್ಟಂತಾಗಿದೆ. ಇವರುಗಳು ಸಮಾಜಕ್ಕೂ ಬೆಳಕಾಗುತ್ತಾರೆ. ನಾವುಗಳೆಲ್ಲಾ ಜೊತೆಗಿರುತ್ತೇವೆ. ನಿಮ್ಮ ಕಾರ್ಯಗಳಲ್ಲಿ ಕೈ ಜೋಡಿಸುತ್ತೇವೆ. ಇಲ್ಲಿ ವೇದಿಕೆ ಮತ್ತು ಸಾಮಾಜಿಕ ಶಿಸ್ತುಗಳನ್ನು ಕಲಿಯುತ್ತೀರಿ. ಒಳ್ಳೆಯ ಸಂಸ್ಥೆಗೆ ಸೇರಿರುತ್ತೀರಿ. ಮುಂದಿನ ದಿನಗಳಲ್ಲಿ ತಮಗೆ ಒಳ್ಳೆಯದಾಗಲಿ ಎಂದರು.

ಜೋನಲ್ ಕೋ–ಆರ್ಡಿನೇಟರ್ ಆದ ರೊ. ಈಶ್ವರಯ್ಯ ಮಾತನಾಡಿ, ಇದು ಹಳೆಯ ಕ್ಲಬ್, ರೋಟರಿ ಎಂದರೆ ಫ್ರೆಂಡ್‌ಶಿಪ್, ಫೆಲೋಶಿಪ್ ಸರ್ವಿಸ್ ಮುಖ್ಯ ಉದ್ದೇಶವಾಗಿದೆ. ಈ ಸಂಸ್ಥೆ ನಾವು ಏನು ಮಾಡಬೇಕು ಎನ್ನುವುದನ್ನು ಕಲಿಸುತ್ತದೆ. ಯುವಕರು ಮುಂದೆ ಬರಬೇಕು. ಅಸಹಾಯಕರಿಗೆ ಸಹಾಯ ಮಾಡಬೇಕು. ನಮ್ಮ ಹೋದ ಜೀವನ ವಾಪಸ್ಸು ಬರಲ್ಲ. ನಮ್ಮ ಜೀವನದಲ್ಲಿ ಏನಾದರೂ ಮಾಡುವುದರ ಮೂಲಕ ಸಾರ್ಥಕತೆ ಇರಬೇಕು. ಸಮಾಜಕ್ಕೆ ಉಪಕಾರ ಮಾಡಿದಲ್ಲಿ ಸಮಾಜ ಸಂಭ್ರಮಿಸುತ್ತದೆ ಎಂದರು.

ಅಂದಿನ ಮುಖ್ಯ ಅತಿಥಿಗಳಾದ ರೊ.ನವೀನ್ ಅಮೀನ್‌ರವರು ಮಾತನಾಡಿ, ಈ ರೋಟರಾಕ್ಟ್ ಖಂಡಿತವಾಗಿಯೂ ಗಟ್ಟಿಯಾಗಿ ಉಳಿಯುತ್ತೆ. ಹಲವಾರು ಕಾರ್ಯಕ್ರಮಗಳನ್ನು ಅಧ್ಯಕ್ಷರು ಹಮ್ಮಿಕೊಂಡಿದ್ದಾರೆ. ಇಲ್ಲಿನ ರೋಟರಿಯವರ ಸಹಾಯ ನಿಮಗಿದೆ. ನಿರಂತರವಾಗಿ ರೋಟರಿಯವರ ಸಂಪರ್ಕದಲ್ಲಿರಿ. ರೋಟರಾಕ್ಟ್‌ನಲ್ಲಿ ವ್ಯಕ್ತಿತ್ವ ವಿಕಸನ ಆದವರು, ರೋಟರಿಯನ್ ಆಗುತ್ತಾರೆ. ಕೆಲವೊಮ್ಮೆ ಕಾರ್ಯಕ್ರಮವನ್ನು ಮಾಡುವಾಗ ತಪ್ಪಾಗುತ್ತೆ. ಆದರೆ ಅದನ್ನು ತಿದ್ದಿಕೊಂಡು ಮುಂದೆ ಸಾಗಬೇಕು. ಇಲ್ಲಿ ಎಷ್ಟು ಕಲಿತರೂ ಸಾಲದು. ನೀವು ಇನ್ನು ನಲವತ್ತು ಜನ ಸೇರಿಸಬಹುದು. ಆದರೆ ಅದರ ಬದಲು ಇನ್ನೊಂದು ಕ್ಲಬ್ ಮಾಡಬಹುದು. ಇದರಿಂದ ಎಲ್ಲರಿಗೂ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶವಾಗುವುದು ಎಂದರು. ನಿಮ್ಮ ಪ್ರತಿಯೊಂದು ಆಹ್ವಾನ ಪತ್ರಿಕೆಯಲ್ಲಿ ರೋಟರಿಯ ಚತುರ್ವಿಧ ಪರೀಕ್ಷೆಯ ಅಂಶಗಳನ್ನು ಮುದ್ರಿಸಿ ಎಂದು ತಿಳಿಸುತ್ತಾ, ಗ್ಲೋಬಲ್ ಗ್ರಾಂಟ್ ಯೋಜನೆಗಳನ್ನು ತಾವುಗಳೂ ಮಾಡಬಹುದು ಎಂದು ತಿಳಿಸಿ, ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು.

ಕೊನೆಯಲ್ಲಿ ಕು.ಅಮೂಲ್ಯರವರು ವಂದಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಕು.ಶೀಲಾರವರು ನೆರವೇರಿಸಿದರು. ರೊ. ಕೆ.ಸೂರ್ಯ ನಾರಾಯಣ ಉಡುಪರು ಮತ್ತು ರೊ.ಎನ್.ಜಿ. ಉಷಾರವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು.

## ಸಂಪಾದಕೀಯ

### 'ಅವರು'...!



ನಮ್ಮಿಂದ ಅವರು ಬಯಸುವುದಾದರೂ ಏನು...? ಅವರು ನಮ್ಮಿಂದ ಏನನ್ನು ನಿರೀಕ್ಷಿಸಿಯಾರು? ಆಸ್ತಿ-ಪಾಸ್ತಿ, ವಸ್ತು, ಒಡವೆ, ಬಟ್ಟೆಬರೆ, ತಿಂಡಿ ? ಅಲ್ಲ..., ಇದಾವುದೂ ಅಲ್ಲ. ಕೇವಲ ಮಾನಸಿಕ ನೆಮ್ಮದಿಯನ್ನು ಬಯಸುತ್ತಾರೆ ಅವರು...!

ಎಲ್ಲಿಂದ ತಂದುಕೊಡುವುದು ಆ ನೆಮ್ಮದಿಯನ್ನು ?

ಎಲ್ಲೆಲ್ಲೂ ಹುಡುಕುವ ಅಗತ್ಯವಿಲ್ಲ.

ಊಟ ಮಾಡಿದ್ರಾ ?, ರಾತ್ರಿ ನಿದ್ದೆ ಬಂತಾ ?, ಮಾತ್ರೆ ತಗೊಂಡ್ರಾ ?, ಮಾತ್ರೆ ಮುಗೀತಾ ?, ತಂದು ಕೊಡ್ತೀನಿ, ಇತ್ಯಾದಿ ಪ್ರೀತಿಯ ಮಾತುಗಳು. ಇಷ್ಟನ್ನೇ ಅವರು ಬಯಸುವುದು! ಅದರಲ್ಲೇ ಇದೆ ಅವರ ನೆಮ್ಮದಿ! ಒಂದು ಒಳ್ಳೆಯ ಮಾತು, ನಡವಳಿಕೆ ಇಷ್ಟರ ಹೊರತು ಬೇರೇನೂ ಬೇಕಿರುವುದಿಲ್ಲ ಅವರಿಗೆ.

ಮನೆಯಲ್ಲೇನೋ ಧಾರ್ಮಿಕ ಕಾರ್ಯಕ್ರಮ ನಡೆದಾಗ ಪ್ರಸಾದ ನೈವೇದ್ಯಗಳನ್ನು ಪುರೋಹಿತರಿಂದ ಪಡೆದು ಮೊದಲು ಅವರಿಗೆ ನಮಸ್ಕರಿಸಿ, ಅವರ ಕೈಯಿಂದಲೇ ಆ ಪ್ರಸಾದ ನೀವು ತೆಗೆದುಕೊಳ್ಳಿ. ಆಗ ಸಿಗುತ್ತದೆ ದೇವರ ಪೂರ್ಣ ಆಶೀರ್ವಾದ !!

ಊಟದ ಪಂಕ್ತಿಯಲ್ಲಿ ಮೊದಲೆರಡು ಬಾಳೆ ಎಲೆಯನ್ನು ಅವರಿಗೆ ಮೀಸಲಟ್ಟು ನೋಡಿ ಅಂದಿನ ಊಟಕ್ಕೆ ಹೊಸತಾದದ್ದೇ ಸವಿಯಿರುತ್ತದೆ! ದಿನವೂ ಅವರೊಟ್ಟಿಗೆ ಕುಳಿತು ಊಟ-ತಿಂಡಿ ಮಾಡಿ, ಆಗ ಅವರ ಮುಖದಲ್ಲಿ ಮಿನುಗುವ ಆನಂದವನ್ನು ನೋಡಿ!

ಕಾರನ್ನು ಕೊಂಡಿದ್ದೀರಿ, ಮನೆಗೆ ತಂದೊಡನೆ ಮೊದಲು ಅವರನ್ನು ಕರೆದು ತೋರಿಸಿ ಹಾಗೆ ಒಂದು ರೌಂಡ್ ತಿರುಗಾಡಿಸಿಕೊಂಡು ಬನ್ನಿ. ಹೋಗುವಾಗ ಮುಂದಿನ ಸೀಟಿನಲ್ಲಿಯೇ ಕೂರಿಸಿ. ಅವರ ಆನಂದಕ್ಕೆ ಪಾರವೇ ಇರುವುದಿಲ್ಲ!! ಮಕ್ಕಳ ಮದುವೆ, ಮುಂಜಿ ಬಗ್ಗೆ ಅವರೊಂದಿಗೆ ಸಮಾಲೋಚಿಸಿ, ಲಗ್ನಪತ್ರಿಕೆಯಲ್ಲಿ ಮೊದಲು ಇಂಥವರ ಮೊಮ್ಮಗ, ಮೊಮ್ಮಗಳು ಎಂದು ಬರೆಸಿ, ಆಗ ನೋಡಿ ಅವರ ಕಂಗಳಿಂದ ತಡೆಯಿಲ್ಲದೆ ಹರಿಯುವ ಆನಂದಾಶ್ರು!!

ಅವರು ಕೇಳದೆಯೇ ಬಟ್ಟೆಬರೆ ತಂದುಕೊಡಿ. ಸಣ್ಣವರಿದ್ದಾಗ ನಾವು ಕೇಳದೆಯೇ ನಮಗವರು ತೊಡಿಸಿ ಸಂಭ್ರಮಿಸಿದ್ದನ್ನು ನೆನಪಿಸಿಕೊಳ್ಳಿ !

ಹೆತ್ತವರಿಗೆ ಇವು ಯಾವುವೂ ಮಾಡಲು ಆಗದಿದ್ದರೆ, 'ನಮ್ಮ ಮನೆಯಲ್ಲಿರುವ ಮುದುಕ! ಮುದುಕಿ...' ಎಂದು ದಯವಿಟ್ಟು ತಾತ್ಸಾರದ ಮಾತನಾಡಬೇಡಿ. ಇದೇ ನೀವು ಅವರಿಗೆ ಕೊಡಬಹುದಾದ ನೆಮ್ಮದಿ!!

ನೆನಪಿಡಿ, ಮುಂದೊಂದು ದಿನ ನಾವೂ ... 'ಅವರು'...!!!

• **ರೊ. ಎಂ. ಮಾಧವಾಚಾರ್**

## ಸರಳ ಮನೆ ಮದ್ದು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ

- ಒಂದು ಚಮಚ ತುಪ್ಪದಲ್ಲಿ ಸ್ವಲ್ಪ ಕರಿ ಮೆಣಸಿನ ಪುಡಿ ಹಾಕಿ ಸೇವಿಸಿದರೆ ಕೆಮ್ಮು ಕಡಿಮೆಯಾಗುತ್ತದೆ.
- ಶುಂಠಿ ರಸಕ್ಕೆ ಜೇನು ಸೇರಿಸಿ ಕುಡಿಯುವುದರಿಂದ ಗಂಟಲಿನ ಕೆರೆತ ಕೆಮ್ಮು ಕಡಿಮೆಯಾಗುತ್ತದೆ.
- ಬಿಸಿ ಹಾಲಿನಲ್ಲಿ ಅರ್ಧ ಚಮಚ ಅರಿಶಿನ ಹಾಕಿ ಕುಡಿಯುವುದರಿಂದ ರಾತ್ರಿಯ ಕೆಮ್ಮು ಕಡಿಮೆಯಾಗುತ್ತದೆ.
- ಈರುಳ್ಳಿ ರಸವನ್ನು ತಲೆಯ ಚರ್ಮಕ್ಕೆ ಹಚ್ಚಿ 30-40 ನಿಮಿಷ ಬಿಡಿ. ನಂತರ ತೊಳೆಯಿರಿ. ಈರುಳ್ಳಿಯ ಗಂಧಕ ಅಂಶದಿಂದ ಕೂದಲು ಬಲವಾಗಿ ಬೆಳೆಯಲು ಸಹಾಯವಾಗುತ್ತದೆ.
- ಅಲೋವೆರಾ ಜೆಲ್ ತಲೆಯ ಚರ್ಮಕ್ಕೆ ಹಚ್ಚಿ 30 ನಿಮಿಷ ಬಿಟ್ಟು ತೊಳೆಯಿರಿ. ತಲೆಯ ಚರ್ಮದ ಹೊಟ್ಟು ನಿವಾರಣೆಯಾಗಿ ಕೂದಲ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

## ರೋಟರಿ ಕ್ಲಬ್ ಶಿವಮೊಗ್ಗಕ್ಕೆ – ಎಕ್ಸಲೆನ್ಸ್ ಅವಾರ್ಡ್



ಉಡುಪಿ ಜಿಲ್ಲೆಯ ಸಾಸ್ತಾನದಲ್ಲಿ ನಡೆದ ರೋಟರಿ ಕ್ಲಬ್ ಸಮ್ಮೇಳನದಲ್ಲಿ ಶಿವಮೊಗ್ಗ ರೋಟರಿ ಕ್ಲಬ್‌ಗೆ ಸಮಾಜ ಸೇವಾ ಕಾರ್ಯಕ್ರಮಗಳಿಗಾಗಿ **"ಕ್ಲಬ್ ಎಕ್ಸಲೆನ್ಸ್ ಅವಾರ್ಡ್" ಹಾಗೂ 21 ಪ್ರಶಸ್ತಿಗಳು ಬಂದಿವೆ.** ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ರೊ. ಪಾಲಾಕ್ಷ ಪ್ರಶಸ್ತಿ ವಿತರಿಸಿದರು. 2024-25ರ ಶಿವಮೊಗ್ಗ ರೋಟರಿ ಕ್ಲಬ್ ಅಧ್ಯಕ್ಷರಾಗಿದ್ದ ರೊ. ಕೆ. ಸೂರ್ಯನಾರಾಯಣ ಉಡುಪ ಮತ್ತು ಕಾರ್ಯದರ್ಶಿಯಾಗಿದ್ದ ರೊ. ಉಷಾ ಎನ್.ಜಿ. ಪ್ರಶಸ್ತಿ ಸ್ವೀಕರಿಸಿದರು.

## ರೋಟರಿ ಮಾಹಿತಿ – ರೊ. ಡಿ.ಎಲ್. ಮಂಜುನಾಥರವರಿಂದ

- ನೂತನ ಅಂತರರಾಷ್ಟ್ರೀಯ ಅಧ್ಯಕ್ಷರಾದ ಫ್ರಾನ್ಸಿಸ್ ಅರಿಜೋರವರು ತಮಗೆ ಅಂತರರಾಷ್ಟ್ರೀಯ ರೋಟರಿ ಕಾರ್ಯಕಾರಿ ಮಂಡಳಿಯಿಂದ ಅಧ್ಯಕ್ಷನಾಗಿ ರೋಟರಿ ಸಂಸ್ಥೆಯನ್ನು ನೀವು ನಿರ್ವಹಿಸಬೇಕು ಎಂಬ ಆದೇಶ ಬಂದ ಬಗ್ಗೆ ವಿಸ್ತೃತವಾದ ವರದಿಯನ್ನು ಪ್ರಕಟಿಸಲಾಗಿದೆ.
- ರೋಟರಿ ಕ್ಲಬ್, ವರ್ಧಮಾನ್ ಜಿಲ್ಲೆ 3240 ನ ಮಹಿಳಾ ಅಧ್ಯಕ್ಷರವರ ಸಾರಥ್ಯದಲ್ಲಿ ಮಹಿಳೆಯರಲ್ಲಿ ಆರೋಗ್ಯ ಕಾಪಾಡಿಕೊಳ್ಳುವ ಮತ್ತು ಶುಚಿತ್ವದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ವಿಶೇಷವಾಗಿ ಮಹಿಳೆಯರ ಪ್ರಕೃತಿ ಸಹಜವಾದ ದಿನಗಳಲ್ಲಿ ಶುಚಿತ್ವ ಮತ್ತು ಪರಿಣಾಮಗಳ ಬಗ್ಗೆ ಬಹಳ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಿ ಶಾಲಾ ಕಾಲೇಜುಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿತರಿಸಲಾಗಿದೆ.
- ಕಾಶ್ಮೀರ ಕಣಿವೆಯಲ್ಲಿ ನಡೆದ ಗುಂಡಿನ ಸದ್ದಿನ ನಡುವಿನ ಆತಂಕದಲ್ಲಿ ಜೀವನ ನಡೆಸುತ್ತಿರುವವರಲ್ಲಿನ ಮಾನವೀಯತೆಯ ದೃಷ್ಟಿಯ ಬಗ್ಗೆ ವಿವರವಾದ ಲೇಖನ ರೋಟರಿ ನ್ಯೂಸ್‌ನಲ್ಲಿದೆ ಎಂದರು.

## *Happy Birthday Wishes*



*Vagdevi M. Jois*
*29th Aug*





*Dr. Shivakumar M.C.*
*4th September*

To,

*Book Post*